## ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ ಬೆಂಗಳೂರು-1

ಸಂಖ್ಯೆ: ಸಿ8(7) ಶಾಶಿಅ ಸುತ್ತೋಲೆ 1/2002-03 ದಿನಾಂಕ: 15-03-2003.

### ಸುತ್ತೋಲೆ

ವಿಷಯ: ಅನುದಾನಿತ ಶಾಲೆಗಳಿಗೆ ವೇತನ ಬಟವಾಡೆ ಅಧಿಕಾರಿಗಳಾಗಿ ನೇಮಕ ಹೊಂದಿರುವ ಅಧಿಕಾರಿಗಳು ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ.

↔ ↔ ↔

ರಾಜ್ಯದಲ್ಲಿನ ಕೆಲವು ಅನುದಾನಿತ ಶಾಲಾ ಆಡಳಿತ ಮಂಡಳಿಗಳು ಮತ್ತು ಶಿಕ್ಷಕರ ಮಧ್ಯೆ ವಿವಾದವುಂಟಾಗಿ ಶಿಕ್ಷಕರಿಗೆ ವೇತನ ವಿಳಂಬವಾಗುತ್ತಿದ್ದು ಪ್ರಕರಣಗಳು ಇಲಾಖಾ ಗಮನಕ್ಕೆ ಬಂದಾಗ ಪರಿಶೀಲಿಸಿ, ಅವಶ್ಯಕತೆಯನ್ನು ಮನಗಂಡು ಅಂಥಹ ಶಾಲೆಗಳಿಗೆ ಇಲಾಖಾ ಅಧಿಕಾರಿಗಳನ್ನು ವೇತನ ಬಟವಾಡೆ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗುತ್ತಿದೆ.

ಈ ರೀತಿ ನೇಮಕಗೊಂಡ ಅಧಿಕಾರಿಗಳು ಆಯಾ ಶಾಲೆಗಳ ಶಿಕ್ಷಕರ/ಸಿಬ್ಬಂದಿಯ ವೇತನಗಳನ್ನು ಮಾತ್ರ ಪಾವತಿ ಮಾಡುತ್ತಿದ್ದು ಶಿಕ್ಷಕರಿಗೆ ದೊರೆಯಬೇಕಾದ ವಾರ್ಷಿಕ ವೇತನ ಮುಂಬಡ್ತಿಗಳು ಹೊಸವೇತನ ಸೌಲಭ್ಯಗಳು ಮುಂತಾದವುಗಳನ್ನು ಮಂಜೂರು ಮಾಡದೆ ಸಿಬ್ಬಂದಿಗಳಿಗೆ ತೊಂದರೆಯುಂಟಾಗುತ್ತಿರುವುದು ಹಲವಾರು ಪ್ರಕರಣಗಳಲ್ಲಿ ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಇದರಿಂದ ವೇತನ ಬಟವಾಡೆ ಅಧಿಕಾರಿಗಳನ್ನು ನೇಮಕ ಮಾಡುವ ಸರ್ಕಾರದ ಮೂಲ ಉದ್ದೇಶ ಸಫಲವಾಗಿರುವುದಿಲ್ಲ. ಪ್ರಯುಕ್ತ ಈ ಕೆಳಗಿನಂತೆ ಸೂಚನೆ ನೀಡಲಾಗಿದೆ.

ಇನ್ನು ಮುಂದೆ ಅನುದಾನಿತ ಪ್ರಾಥಮಿಕ/ಪ್ರೌಢ ಶಾಲೆಗಳಿಗೆ ವೇತನ ಬಟವಾಡೆ ಅಧಿಕಾರಿಗಳಾಗಿ ನೇಮಕಗೊಳ್ಳುವ ಇಲಾಖಾ ಅಧಿಕಾರಿಗಳು ತಾವು ನೇಮಕಗೊಂಡಿರುವ ಶಾಲೆಯ ಅನುಮೋದಿತ ಶಿಕ್ಷಕರು/ಸಿಬ್ಬಂದಿಯ ವಾರ್ಷಿಕ ವೇತನ ಬಡ್ತಿಗಳು ವೇತನ ಪರಿಷ್ಕರಣೆಯಿಂದ ಹೊಸ ವೇತನ ಶ್ರೇಣಿಗೆ ವೇತನ ನಿಗಧಿ ಸೌಲಭ್ಯಗಳನ್ನು ತಪ್ಪದೇ ಮಂಜೂರು ಮಾಡುವುದು. ಕೆಲವು ಶಿಕ್ಷಕರಿಗೆ ಯಾವುದೇ ಶಿಸ್ತು ಕ್ರಮದಡಿಯಲ್ಲಿ ನಿಯಮಾನುಸಾರ ವಿಚಾರಣೆ ನಡೆದು ಅವರ ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿದಿದ್ದಲ್ಲಿ ಮಾತ್ರ ಅಂಥಹ ಶಿಕ್ಷಕರ ವಾರ್ಷಿಕ ವೇತನ ಬಡ್ತಿಗಳನ್ನು ಮಂಜೂರು ಮಾಡತಕ್ಕದ್ದಲ್ಲ ಎಂದು ಸ್ಪಷ್ಟಪಡಿಸಿದೆ.

ವೇತನ ಬಟವಾಡೆ ಅಧಿಕಾರಿಗಳು ವಾರ್ಷಿಕ ವೇತನ ಮುಂಬಡ್ತಿ ಹಬ್ಬದ ಮುಂಗಡ, ಹೊಸ ವೇತನ ಶ್ರೇಣಿಗಳಲ್ಲಿ ವೇತನ ನಿಗಧಿ, ಶಿಕ್ಷಕರಿಗೆ ಆಕಸ್ಮಿಕ ರಜೆ, ಮಂಜೂರು ಮಾಡುವುದು ಮತ್ತು ಮಾಸಿಕ ವೇತನ ಪಾವತಿ ಮಾಡುವ ಅಧಿಕಾರವುಳ್ಳವರಾಗಿರುತ್ತಾರೆ. ಈ ಸೌಲಭ್ಯಗಳನ್ನು ಶಿಕ್ಷಕರಿಗೆ ನಿಯಮಾನುಸಾರ ಆಯಾ ಕಾಲಕ್ಕೆ ಮಂಜೂರು ಮಾಡಲು ಕ್ರಮ ತೆಗೆದುಕೊಳ್ಳಲೂ ಸಹ ಸೂಚಿಸಿದೆ.

ಸಹಿ
ಆಯುಕ್ತರು

This document was created with Win2PDF available at http://www.daneprairie.com.
The unregistered version of Win2PDF is for evaluation or non-commercial use only.